<u>**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**</u>

<u>**ಸಿ.ಸಿ.ನಂ.418/2018**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಗಿರೀಶ ಬಾರ್ಕಿ | ಸಿಡಬ್ಲ್ಯೂ | 12 |
| ತಂದೆ ಹೆಸರು | ಹಾಲಪ್ಪ | ಪಿಡಬ್ಲ್ಯೂ | 8 |
| ವಯಸ್ಸು | 52 ವರ್ಷ | | |
| ಉದ್ಯೋಗ | ಕೂಲಿ | | |
| ವಾಸಸ್ಥಳ | ಚಿಕ್ಕೇರೂರ ತಾಃ ಹಿರೇಕೆರೂರ | | |

<u>**ದಿಃ 04.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.**</u>

1). ನನಗೆ ಚಾ.ಸಾ-1,8 ರಿಂದ 11 ಮತ್ತು 1 ನೇ ಆರೋಪಿಯ ಪರಿಚಯ ಇರುವದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ ಠಾಣೆಗೆ ಹೋಗಿ ಯಾಹಿದೇ ಹೇಳಿಕೆ ಕೊಟ್ಟಿಲ್ಲ ಮತ್ತು ಈ ಪ್ರಕರಣದ ಕುರಿತಾಗಿ ನನಗೆ ಸ್ವಂತಕ್ಕೆ ಮಾಹಿತಿ ಇರುವದಿಲ್ಲ. 1 ನೇ ಆರೋಪಿಯನ್ನು ಮೊದಲನೇ ಬಾರಿಗೆ ಇದೇ ದಿವಸ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಚಾ.ಸಾ-1 ಮತ್ತು 1 ನೇ ಆರೋಪಿಯ ನಡುವೆ ಆದ ವ್ಯವಹಾರದ ಕುರಿತಾಗಿ ನನಗೆ ಮಾಹಿತಿ ಇರುವದಿಲ್ಲ .

<u>**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**</u>

<u>**ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.**</u>

2) ದಿನಾಂಕಃ 12.12.2016 ರಂದು ಪೊಲೀಸರ ಮುಂದೆ ನಾನು ಕೊಟ್ಟಂತಹ ಸಾಕ್ಷಿಗೆ ಒದಿ ಹೇಳಿ ಕೇಳಲಾಗಿ ಸಾಕ್ಷಿಯು ಆ ಕುರಿತಾಗಿ ಯಾವುದೇ ಸಾಕ್ಷವನ್ನು ಒಪ್ಪಿಕೊಂಡಿರುವದಿಲ್ಲ. ಅದ್ದರಿಂದ ಹೇಳಿಕೆಯನ್ನು ನಿ.ಪಿ-12 ಎಂದು

ಗುರುತಿಸಲಾಯಿತು. 1 ನೇ ಆರೋಪಿ ನನಗೆ ಪರಿಚಯ ಇರುವದರಿಂದ ನನಗೆ ಈ ಪರಕರಣದಲ್ಲಿ ಆದಂತಹ ವ್ಯವಹಾರದ ಕುರಿತಾಗಿ ನನಗೆ ಮಾಹಿತಿ ಇದ್ದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಆರೋಪಿ ಪರವಾಗಿಃ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.